International Journal for Multidisciplinary Research (IJFMR)
E-ISSN: 2582-2160 ● Website: www.ijfmr.com ● Email: editor@ijfmr.com

# ಶರಣರಲ್ಲಿ ಕಾಯಕ ನಿಷ್ಠೆ

**ಕೃಷ್ಣಮೂರ್ತಿ.ಜಿ**

ಸಹಾಯಕ ಪ್ರಾಧ್ಯಾಪಕರು, ತ್ರಿವೇಣಿ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ

**ABSTRACT**:
ಹನೇರಡನೇ ಶತಮಾನದ ಶಿವಶರಣರ ವಚನಗಳಲ್ಲಿನ ಕಾಯಕತತ್ವ ಪ್ರಸ್ತುತ ಸಮಾಜಕ್ಕೆ ಮಾದರಿಯಾಗಿದೆ. ದಾಪಂತ್ಯದಲ್ಲಿಯೂ ಶರಣ ತತ್ವವನ್ನು ಅರ್ಥೈಸುವ ರೀತಿ ಮತ್ತು ಆಚರಣೆ ನಮ್ಮೆಲ್ಲರ ಬದುಕಿಗೆ ಅನ್ವಯಂಶಗಳನ್ನು ಒಳಗೊಂಡಿದೆ.

**KEYWORDS**: ವೈಚಾರಿಕತೆ, ವಚನ ಕ್ರಾಂತಿ, ವಚನ ಚಳುವಳಿ, ಸಾಂಸ್ಕೃತಿಕ ಮುಖಾಮುಖಿ, ಕನ್ನಡ ಸಾಹಿತ್ಯ ಚರಿತ್ರೆ, ಕಾಯಕವೇ ಕೈಲಾಸ, ಕಾಯಕ ನಿಷ್ಠೆ, ವಚನಕಾರರು, ವೈಚಾರಿಕ ಕ್ರಾಂತಿ.

ಕಾಯಕ ನಿಷ್ಠೆ ಶರಣು ಇಡೀ ಪ್ರಚಂಚೆಕ್ಕೆ ನೀಡಿದ ಕೊಡುಗೆಯಾಗಿದೆ. ಈ ಮಾತಿನಿಂದ ವಚನಕಾರರು ಕಂಡುಕೊಂಡ ಅರ್ಥವ್ಯಾಪ್ತಿ ಇಡೀ ಪ್ರಪಂಚದ ಕಾಯಕ ಪ್ರಜ್ಞೆಯನ್ನು ನಮ್ಮ ಮುಂದಿಡುವ ಕೆಲಸ ಮಾಡುತ್ತದೆ. ಒಂದಲ್ಲ ಒಂದು ಕಾರಣ ಭೂಮಿ ಮೇಲೆ ಜೀವಿಸುವ ಪ್ರತಿಯೊಬ್ಬರು ಕೆಲಸದಲ್ಲಿ ನಿರತರಾಗುತ್ತಾರೆ. ಇಲ್ಲಿ ಕಾರಕ ಎಂಬ ಪದ ಕೇವಲ ಕೆಲಸವನ್ನು ಉದ್ದೇಶಿಸದಲ್ಲ ಇದೊಂದು ಪೂರ್ಣನಿಷ್ಠೆಯಿಂದ ನಡೆಸುವ ಧ್ಯಾನಸ್ಥ ಸ್ಥಿತಿಯಾಗಿದೆ. ಈ ಕಾಯಕ ಕೈಕರ್ಯಕ್ಕೆ ನಿಸ್ವಾರ್ಥ ಮನೋಭಾವದ ಕಾರ್ಯವೇ ಕೈಲಾಸ ಎಂದು ಆಯ್ಕಕ್ಕಿ ಮಾರಯ್ಯ ತನ್ನ ವಚನದ ಮೂಲಕ ಇತಿಳಿಸುತ್ತಾನೆ.

ಕಾಯಕದಲ್ಲಿ ನಿರತನಾದಡೆ
ಗುರು ದರ್ಶನವಾದಡು ಮರೆಯಬೇಕು,
ಲಿಂಗ ಪೂಜೆಯಾದಡು ಮರೆಯಬೇಕು,
ಜಂಗಮ ಮುಂದಿದ್ದಡು ಹಂಗು ಹರಿಯಬೇಕು
ಕಾಯಕವೇ ಕೈಲಾಸವಾದ ಕಾರಣ
ಅಮಲೇಶ್ವರಲಿಂಗವಾಯಿತ್ತಾದಡು ಕಾಯಕದೊಳಗು.
-ಆಯ್ದಕ್ಕಿ ಮಾರಯ್ಯ

ಕಾಯಕ ನಿಷ್ಠೆಯನ್ನು ಸಾರುವ ಈ ವಚನ ಗುರು, ಲಿಂಗ, ಜಂಗಮಕ್ಕಿಂತ ಕಾಯಕವೇ ಸರ್ವಶ್ರೇಷ್ಠ ಎಂದು ಬಿಂಬಿಸುತ್ತದೆ. ಇದರಕ್ಕೆ ಸಂಬಂಧಿಸಿದಂತೆ ಮಾರಯ್ಯ ಮತ್ತು ಆತನ ಮಡದಿಗೆ ಸಂಬಂಧಿಸುದಂತೆ ಒಂದು ಕಥೆಯನ್ನು ಗಮನಿಸಬಹುದು. ಬಿದ್ದ ಅಕ್ಕಿಯನ್ನು ಆರಿಸಿತಂದು ಶುದೀಕರಿಸಿ ಅದರಿಂದ ಶಿವ ಪ್ರಸಾದವನ್ನು ಮಾಡಿ ದಾಸೋಹ ಮಾಡುವುದು ಮಾರಯ್ಯ ಮತ್ತು ಲಕ್ಕಮ್ಮನ ನಿತ್ಯ ಬದುಕಿನ ಭಾಗವಾಗಿತ್ತು. ಆದರೆ ಅದೊಂದು ದಿನ ಆಯ್ದಕ್ಕಿ ಮಾರಯ್ಯ ಬಸವಣ್ಣನ ಅಂಗಳದಲ್ಲಿ ರಾಸಿಯಾಗಿ ಬಿದ್ದಿದ ಅಕ್ಕಿಯನ್ನು ಯಥೇಚವಾಗಿ ತರುತ್ತಾರೆ. ಇದರಿಂದ ಸಿಟ್ಟಾದ ಆಯ್ದಕ್ಕಿ ಲಕ್ಕಮ್ಮ ತನ್ನ ಗಂಡನಿಗೆ ಕಾಯಕದಲ್ಲಿನ ಮಹತ್ವವನ್ನು ತನ್ನ ವಚನದ ಮೂಲಕ ತಿಳಿಸುತ್ತಾಳೆ.

ಆಸೆಯೆಂಬುದು, ಅರಸಿಂಗಲ್ಲದೆ,
ಶಿವಭಕ್ತರಿಗುಂಟೆ ಅಯ್ಯಾ?

ರೋಷವೆಂಬುದು ಯಮದೂತರಿಗಲ್ಲದೆ,
ಅಜಾತರಿಗುಂಟೆ ಅಯ್ಯಾ?
ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ,
ಮಾರಯ್ಯಪ್ರಿಯ ಅಮರೇಶ್ವರಲಿಂಗಕ್ಕೆ
ದೂರ ಮಾರಯ್ಯ
- ಆಯ್ಕಕ್ಕಿ ಲಕ್ಕಮ್ಮ

ಮೇಲ್ಕಂಡ ವಚನದ ಮೂಲಕ ತನ್ನ ಗಂಡ ಆಯ್ದಕ್ಕಿ ಮಾರಯ್ಯನನ್ನು ಪ್ರಶ್ನಿಸುತ್ತಾಳೆ. ಅಕ್ಕಿಯನ್ನು ಆಯ್ದು ತಂದಿದ್ದ ಗಂಡನ ಮೇಲೆ ಸಿಟ್ಟಾಗುವುದನ್ನು ಕಾಣಬಹುದು. ಲಕ್ಕಮ್ಮ ಈಸಕ್ಕಿಯಾಸೆ ನಿಮಗೇಕೆ? ಎಂಬ ಪ್ರಶ್ನೆಯ ಮೂಲಕ ತಂದ ಹೆಚ್ಚಿನ ಅಕ್ಕಿಯನ್ನು ಮತ್ತೆ ಬಸವಣ್ಣನ ಅಂಗಳದಲ್ಲಿ ವಾಪಸ್ಸು ಸುರಿದು ಬರಲು ತಿಳಿಸುತ್ತಾಳೆ. ಆಯ್ದಕ್ಕಿ ಲಕ್ಕಮ್ಮ ಮಾತಿನಿಂದ ಬದಲಾದ ಮಾರಯ್ಯ ಅಕ್ಕಿಯನ್ನು ಸುರಿದು ಬರುತ್ತಾನೆ. ಒಬ್ಬ ಸಾಮಾನ್ಯ ಶರಣೆ ಈ ಮೂಲಕ ಕಾಯಕದ ಮೌಲ್ಯವನ್ನು ಕಾಯಕವೇ ಕೈಲಾಸವೆಂದು ಸಾರಿ ಹೇಳಲು ಸಾಧ್ಯಾವಾಯಿತು. ಬಡತನ ದಾರಿದ್ಯಗಳು ಪೂರ್ಣಶುದ್ಧ ಮನಸ್ಸಿನವರಿಗಿರುತ್ತದೆಯೇ ವಿನಹ ಮನಸ್ಸು ಶುದ್ಧವಾಗಿರದವರಿಗಲ್ಲ ಎಂದು ಹೇಳುವ ಮೂಲಕ ಆಯ್ದಕ್ಕಿ ಲಕ್ಕಮ್ಮ ಕಾಯಕ ನಿಷ್ಠೆಗೆ ಹೊಸ ಆಯಾಮವನ್ನು ನೀಡುತ್ತಾಳೆ.

"ಕಾಯಕ ನಿಂದಿತ್ತು ಹೋಗಯ್ಯಾ ಎನ್ನಾಳ್ದನೆ
ಭಾವಶುದ್ಧವಾಗಿ ಮಹಾಶರಣರ ತಿಪ್ಪೆಯತಪ್ಪಲ ಅಕ್ಕಿಯ ತಂದು
ನಿಶ್ಚೈಸಿ ಮಾಡಬೇಕು ಮಾರಯ್ಯಪ್ರಿಯ ಅಮರೇಶ್ವರ ಲಿಂಗಕ್ಕೆ
ಬೇಗ ಹೋಗು ಮಾರಯ್ಯಾ"
- ಆಯ್ದಕ್ಕಿ ಲಕ್ಕಮ್ಮ

ಎಂದು ಗಂಡನಾದ ಮಾರಯ್ಯನನ್ನು ಎಚ್ಚರಿಸುವ ಸಮಯಪ್ರಜ್ಞೆಯನ್ನು ನೆನಪಿಸುತ್ತಾಳೆ. ಅದರಂತೆ ವೃತ್ತಿ-ಕಾಯಕಗಳ ನಡುವಣ ವ್ಯತ್ಯಾಸ ಎಂಬುದು ಭಾವ ಶುದ್ಧತೆ ಮತ್ತು ನಿಷ್ಠೆಯಿಲ್ಲದಿದ್ದರೆ ಸಾಧ್ಯವಿಲ್ಲ ಎಂದು ತಿಳಿಯುತ್ತದೆ.  ಈ ಮೂಲಕ ಭಕ್ತಿ ಎಂಬುದು ಕಾಯಕದ ಮೂಖೇನ ಸಾಧಿಸಬೇಕು. ಕಾಯಕವೇ ನಿಜಭಕ್ತಿ ಎಂಬುದನ್ನು ತಿಳಿಸುತ್ತಾರೆ.

ಇದರಂತೆ ದುಡಿಮೆ ಪ್ರತಿಯೊಬ್ಬರ ಕರ್ತವ್ಯದ ಭಾಗ ಎಂದು ಸಾರುವ ವಚನಕಾರರು ದುಡಿಯದೆ ತಿನ್ನುವವರ ಬಗ್ಗೆ ಈ ರೀತಿ ಮಾತಾಡಿದ್ದಾರೆ.

ಕಾಯಕಕ್ಕಾರದೆ, ಮೈಸೋಂಬತನದಿಂದ
ಬೇರೆ ಕೂಳ ಗಳಿಸಲಾರದೆ ಹಸಿದಿಪ್ಪರಯ್ಯಾ,
ಉಡಲು ಸೀರೆಯ ಗಳಿಸಲಾರದೆ,
ಕಚ್ಚುಟವ ಕಟ್ಟಿಕೊಂಡಿಪ್ಪರಯ್ಯಾ,
ಮೀಯಲೆಣ್ಣೆಯ ಗಳಿಸಲಾರದೆ,
ಮಂಡೆ ಬೋಳಾಗಿಪ್ಪರಯ್ಯಾ,
ದಿಟದಿಂದ ಬಿಡಿಸದೆ,
ನಿಸ್ಸಂಸಾರದ ಸಟೆಯನವಧರಿಸಿಕೊಂಡಿಪ್ಪವರಿಗೆ ಆನಂಜುವೆ,
ಸಕಳೇಶ್ವರದೇವಾ.
-ಸಕಲೇಶ್ವರ ಮಾದರಸ

ಎಂದು ಸಕಲೇಶ್ವರ ಮಾದರಸ ವಚನಕಾರರು ದುಡಿಯದೆ ತಿನ್ನುವ ವೈರಾಗಿಗಳ ಕುರಿತು ವ್ಯಂಗ್ಯವಾಗಿಡಿದ್ದಾರೆ. ಶಿಷ್ಠಯಿಂದ ದುಡಿಯಲು ಸಾಧ್ಯವಾಗದೇ ಬೇರೆಯವರ ಗಳಿಕೆಯಲ್ಲಿ ಜೀವಿಸುವುದು ಮಹಾ ಅಪರಾಧವೆಂದು ಹೇಳುತ್ತಾರೆ. ಪ್ರತಿದಿನದ ಅಗತ್ಯ

ವಸ್ತುಗಳು ಪಡೆಯಲಾಗದವುರು ಹೇಗೆ ಬದುಕಿನಲ್ಲಿ ಆರಾಧನೆಯ ಮೂಲಕ ದೇವರನ್ನು ಒಲಿಸಿಕೊಳ್ಳಲು ಸಾಧ್ಯ ಎಂಬುದನ್ನು ಪ್ರಶ್ನಿಸುವುದನ್ನು ಕಾಣಬಹುದು.

ಕಾಯವಿಡಿದಿಹನ್ನಬರ ಶಿವಭಕ್ತಂಗೆ ಕಾಯಕವೆ ಕೈಲಾಸ.
ಕಾಯಕವಿಲ್ಲದವನ ಅರಿವು ವಾಯವಾಯಿತ್ತು.
ಅಡುಗೂಲಿಯ ಮನೆಯಂತೆ ಗಡಿಗೆಯ ಗಂಜಿಯಾಸೆಬೇಡ.
ಕೊಡುವರೆಂದೊಬ್ಬರ ಮನೆಗೆ ಅಡಿಗಡಿಗೆ ಹೋಗಬೇಡ.
ಇಂತಿವರಡಿಯ ಕಾಬುದಕ್ಕೆ ಮೊದಲೆ ಅಡಗಿದೆಯಲ್ಲಾ,
ಮನಸಂದಿತ್ತು ಮಾರೇಶ್ವರಾ.
-ಮನಸಂಧಿ ಮಾರಿತಂದೆ

ನಿಜ ಶರಣನಿಗೆ ಕಾಯಕವೇ ನಿಜವಾದ ಕೈಲಾಸ. ಕಾಯಕವೆಂಬುದಿಲ್ಲವೆಂದರೆ ಅ ಶರಣನ ಮನಸ್ಸು ಗಾಳಿಯ ರೀತಿಯಾಗುವುದು. ಸಣ್ಣತನ ಎಂಬುದು ಮನಸ್ಸಿನಲ್ಲಿ ಹೆಚ್ಚಾಗುವುದು. ಆದರಿಂದ ನಮ್ಮೊಳಗಿನ ಯೋಚನೆಗಳು ಸಮಾಜ ಹಿತಚಿಂತನೆಗಳೇ ಆಗಿರಬೇಕು ಎಂಬುದನ್ನು ತಿಳಿಸುತ್ತಲೇ ಶಿವನಿಗೆ ಹತ್ತಿರಾಗಬೇಕೆಂದರೆ ಶುದ್ಧ ಮನಸಿನ ಅಗತ್ಯವಿದೆ. ಕಾಯಕದಲ್ಲಿ ಹಿಂಜರಿಯದೆ ಕಾಯಕನಿರತರಾಗಬೇಕೆಂದು ತಿಳಿಸುತ್ತಾರೆ.

ಸತ್ಯ ಶುದ್ಧ ಕಾಯಕದಿಂದ ಬಂದ ದ್ರವ್ಯದಲ್ಲಿ
ಚಿತ್ತ ವಿಚ್ಛಂದವಾಗದಿರಬೇಕು.
ನೇಮದ ಕೂಲಿಯಂದಿನ ನಿತ್ಯ ನೇಮದಲ್ಲಿ ಸಂದಿಲ್ಲದಿರಬೇಕು.
ನೇಮದ ಕೂಲಿಯ ಬಿಟ್ಟು
ಹೇಮದಾಸೆಗೆ ಕಾಮಿಸಿ ದ್ರವ್ಯದ ಹಿಡಿದಡೆ
ತಾ ಮಾಡುವ ಸೇವೆ ನಷ್ಟವಯ್ಯಾ,
ನಿನ್ನಾಸೆಯ ವೇಷದ ಪಾಶಕ್ಕೆ ನೀನೆ ಹೋಗು.
ನನಗೆ ನಮ್ಮ ಜಂಗಮದ ಪ್ರಸಾದದಾಗೆ
ಚಂದೇಶ್ವರಲಿಂಗಕ್ಕೆ ಪ್ರಾಣವಯ್ಯಾ.
-ನೂಲಿನ ಚಂದಯ್ಯ

ಬದುಕಿನ ಸತ್ಯವನ್ನು ತಿಳಿಸುವ ನೂಲಿನ ಚಂದಯ್ಯ ಸತ್ಯ ಶುದ್ಧತೆಯ ಮೂಲಕ ಕಾಯಕಯೋಗಿಗಳಾಗಬೇಕು ಎಂದು ತಿಳಿಸುತ್ತಾನೆ. ಬದುಕಿಗೆ ನಿಮಯದ ಜೊತೆಗೆ ದುಡಿಮೆ ಇರಬೇಕು ಎಂದು ಪ್ರತಿಪಾದಿಸುತ್ತಾನೆ. ಯಾವುದೇ ಕೆಲಸದಲ್ಲಿ ಅತಿಆಸೆ ಎಂಬುದು ಇರಬಾರದು ಎಲ್ಲರಿಗೂ ದುಡಿಮೆಗೆ ತಕ್ಕ ಪ್ರತಿಫಲ ಎಂಬುದು ಲಭಿಸುತ್ತದೆ ಯಾವುದೇ ಕಾರಣಕ್ಕು ಅನ್ಯರ ಹಣಕ್ಕೆ ಎಂದು ಆಸೆ ಪಡಬಾರದು ಎಂದು ಹನ್ನೆರಡನೇ ಶತಮಾನದಲ್ಲಿ ನಮ್ಮ ಶಿವಶರಣರು ತಿಳಿಸಿದ್ದಾರೆ. ಕಾಯಕ ಎಂಬುದು ಜೀವನ ನಡೆಸಲಿರುವ ಮಾರ್ಗ ಎಂಬುದಾಗಿ ತಿಳಿಸುತ್ತಾ ಮೇಲು-ಕೀಳುಗಳನ್ನು ಪಾಲಿಸುವವನು ಶಿವಶರಣನಾಗಲು ಅನರ್ಹ ಎಂದು ಹೇಳುತ್ತಾರೆ. ದುಡಿಮೆಯೇ ದೇವರ ಪ್ರಸಾದವಾಗಿದ್ದು ಅನ್ನವೇ ಪ್ರಸಾದ ರೂಪದಲ್ಲಿ ಹಂಚಬೇಕು ಎಂದು ತಿಳಿಸುತ್ತಾರೆ. ಈ ರೀತಿ ಶಿವಶರಣರು ತಮ್ಮ ಮಾತಿಂದ ಕಟ್ಟಿದ ವಚನಗಳು ನಮ್ಮೆಲ್ಲರ ದಾರಿದೀಪವಾಗಿ ಸಮಾಜದಲ್ಲಿನ ತರತಮ ಭಾವಗಳನ್ನು ಹೋಗಲಾಡಿಸಲು ಇವತ್ತಿಗೆ ಕಂಡುಕೊಂಡಿರುವ ಮಾರ್ಗೋಪಾಯವಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಸಮಗ್ರ ವಚನ ಸಂಪುಟ : ಡಾ.ಎಂ.ಎಂ.ಕಲಬುರ್ಗಿ
2. ವಚನ ಸಾಹಿತ್ಯ: ಡಾ.ಎಂ.ಚಿದಾನಂದ ಮೂರ್ತಿ

E-ISSN: 2582-2160 ● Website: www.ijfmr.com ● Email: editor@ijfmr.com


3. ಶರಣತತ್ವ ಚಿಂತನ: ಸಂ.ಡಾ.ಎ.ಎಲ್.ಶಿವರುದ್ರಪ್ಪ
4. ವಚನ ಕಾವ್ಯ ಚಿಂತನೆ: ಸಂ.ಡಾ.ಎಸ್.ಎಂ.ಹಿರೇಮಠ
5. ಶರಣರ ಅನುಭಾವ ಸಾಹಿತ್ಯ: ಡಾ.ಎಚ್.ತಿಪ್ಪೇರುದ್ರಸ್ವಾಮಿ